

> ಅವಳಿಲ್ಲದೆ ನನಗೆ ಬಾಳೇ ಇಲ್ಲ. ಆದುದರಿಂದ ಅವಳು ಸಾಯಬಾರದು. ನಾನು ಕೊಲೆಗಡುಕನೆಂದಾಗಬಾರದು. ಒಂದು ವೇಳೆ ಅವಳು ಸತ್ತೇ ಹೋದರೆ ನನ್ನನ್ನು ಬಂಧಿಸಿ, ಜೈಲಿಗಟ್ಟುತ್ತಾರೆ. ಅಲ್ಲಿಗೆ ನನ್ನ ಜೀವನ ಮುಗಿದೇಹೋಗುತ್ತದೆ. ನಾನು ಎಲ್ಲರ ಕಣ್ಣಲ್ಲಿ ಸೈಕೋ ಕ್ರಿಮಿನಲ್ ಆಗಿ ಬಿಡುತ್ತೇನೆ, ಹಾಗಾಗಕೂಡದು...

ಬೆಳಿಗ್ಗೆಯೇ ಸರಿ. ಅವಳಿಗೆ ತನ್ನ ಪ್ರಮಾದದ ಅರಿವಾದರೆ ಸಾಕು. ಅವನು ಮನದಲ್ಲೇ ಹೇಳಿಕೊಂಡ. ನಾನವಳಿಗೆ ಮರೆಯಲಾಗದ ಪಾಠ ಕಲಿಸುತ್ತೇನೆ. ನನ್ನನ್ನು ತಿರಸ್ಕರಿಸಿದವಳನ್ನು ಬೇರಾರೂ ಮದುವೆಯಾಗಬಾರದು. ಅವಳು ಆ ಬಳಿಕವಾದರೂ ನನ್ನನ್ನು ಒಪ್ಪಬಹುದು. ಇಲ್ಲ. ಅವಳಿಲ್ಲದೆ ನನಗೆ ಬಾಳೇ ಇಲ್ಲ. ಆದುದರಿಂದ ಅವಳು ಸಾಯಬಾರದು. ನಾನು ಕೊಲೆಗಡುಕನೆಂದಾಗಬಾರದು. ಒಂದು ವೇಳೆ ಅವಳು ಸತ್ತೇ ಹೋದರೆ ನನ್ನನ್ನು ಬಂಧಿಸಿ, ಜೈಲಿಗಟ್ಟುತ್ತಾರೆ. ಅಲ್ಲಿಗೆ ನನ್ನ ಜೀವನ ಮುಗಿದೇಹೋಗುತ್ತದೆ. ನಾನು ಎಲ್ಲರ ಕಣ್ಣಲ್ಲಿ ಸೈಕೋ ಕ್ರಿಮಿನಲ್ ಆಗಿ ಬಿಡುತ್ತೇನೆ, ಹಾಗಾಗಕೂಡದು.

ಇದೀಗ ಸರಿಯಾಯಿತು. ಅವಳು ಕಾಲೇಜಿಗೆ ಎಂಟರಾಗುವಾಗ ನಾನು ಎದುರಿನಿಂದ ಬರಬೇಕು. ಕಾಲೇಜಲ್ಲಿ ನನ್ನ ಗುರುತಿನವರು ಅವಳನ್ನು ಬಿಟ್ಟರೆ ಬೇರಾರೂ ಇಲ್ಲ. ಅವಳಿಗೂ ಗುರುತು ಸಿಗಬಾರದು. ಅದಕ್ಕೆ ಮುಖಕ್ಕೆ ಮುಸುಕು ಕಟ್ಟಿಕೊಳ್ಳಬೇಕು. ಕೃತ್ಯ ನಡೆಸಿದ ತಕ್ಷಣ ಪರಾರಿ ಆಗಿ ಬಿಡಬೇಕು. ಯಾರ ಕೈಗೂ ಸಿಕ್ಕಿ ಬೀಳಬಾರದು. ಕೇವಲ ಜೈಲು ಎಂದಾದರೆ ಹೇಗಾದರೂ ಅನುಭವಿಸಬಹುದು. ಕಾಲೇಜು ಹುಡುಗರ ದಂಡು ಧರ್ಮದೇಟು ನೀಡಿ ಕೊಂದೇಬಿಟ್ಟರೆ ಅವಳನ್ನು ಮತ್ತೆ ಮದುವೆಯಾಗುವವರು ಯಾರು? ಹುಡುಗರಿಂದ ಬಚಾವಾದರೂ ಪೊಲೀಸರಿಂದ ಪಾರಾಗುವುದು ಹೇಗೆ? ಇನ್ನೂ ಒಂದು ಅಪಾಯವಿದೆ. ಅದು ಪೊಲೀಸ್ ಎನ್‌ಕೌಂಟರ್! ಅದರಲ್ಲಿ ಸತ್ತರೆ ಆ ಹುಡುಗಿಗೆ ಗತಿ ಯಾರು? ಮನೆಯಲ್ಲಿನ ಪರಿಸ್ಥಿತಿ ಹೇಗಿರುತ್ತದೆಯೋ... ಅವನು ತಲೆ ಕೊಡಹಿದ. ಏನು ಬೇಕಾದರೂ ಆಗಲಿ. ಅವಳಿಗೆ ತಕ್ಕ ಪಾಠವಾಗಲೇಬೇಕು. ಕಾಲೇಜಲ್ಲೇ ಕೃತ್ಯ ನಡೆಸುವುದು. ಅದೂ ಬೆಳಗ್ಗಿನ ಪ್ರೇಯರಿಗಿಂತ ಮುಂಚೆಯೇ ಅವಳಿಗೆ ಏನಾದರೂ ಸೀರಿಯಸ್ಸಾದರೆ ಚಿಕಿತ್ಸೆಗೆ ಸಾಕಷ್ಟು ಸಮಯವಿರುತ್ತದೆ. ಅವಳು ಸಾಯಬಾರದು. ಅವಳು ಸಾಯದಂತೆ ನಾನು ಹೇಗೆ ಅವಳಿಗೆ ಪಾಠ ಕಲಿಸುವುದು?

ಅವನ ಕಣ್ಣೆದುರು ಕಾಟೇರ ಸಿನಿಮಾ ಜಾಹೀರಾತಿನ ಚೂರಿ ಕಾಣಿಸಿಕೊಂಡಿತು. ಚೂರಿಯಿಂದ ಇರಿಯಲೆ? ಒಂದು ಬಾರಿ ಹೇಗೋ ಇರಿಯಬಹುದು. ನಾಲ್ಕೈದು ಬಾರಿ ಇರಿಯಲು ನನ್ನಿಂದ ಸಾಧ್ಯವಿಲ್ಲ. ಪರರ ರಕ್ತ ಕಂಡಾಗ ತಲೆ ತಿರುಗುತ್ತದೆ. ನಾನು ಇರಿದಾಗ ಅವಳ ದೇಹದಿಂದ ಸುರಿಯುವ ರಕ್ತ ನನ್ನ ಪ್ರಜ್ಞೆ ತಪ್ಪಿಸಿದರೆ ನಾನು ಸುಲಭವಾಗಿ ಸಿಕ್ಕಿ ಬೀಳುತ್ತೇನೆ.

ಹಾಗಾದರೆ ಅವಳಿಗೆ ಪಾಠ ಕಲಿಸುವುದು ಹೇಗೆ? ಉಳಿದದ್ದು ಒಂದೇ ಹಾದಿ. ಮುಖಕ್ಕೆ ಆ್ಯಸಿಡ್ ಎರಚುವುದು! ಅದೂ ಸ್ವಲ್ಪವೇ ಸ್ವಲ್ಪ. ಅವಳು ಪೂರ್ತಿ ಕುರೂಪಿಯಾಗಬಾರದು. ಆದರೆ ನೋವುಣ್ಣಬೇಕು. ನಾನು ಅವಳಿಂದಾಗಿ ನೋವುಣ್ಣುತ್ತಿಲ್ಲವೆ? ಅವಳಿಗೂ ನೋವಾಗಬೇಕು. ನನ್ನನ್ನು ತಿರಸ್ಕರಿಸಿದವಳಿಗೆ ಏನೂ ಆಗದಿದ್ದರೆ ಹೇಗೆ? ಅವನು ತನ್ನನ್ನು ಪ್ರಶ್ನಿಸಿಕೊಂಡ. ಅವಳು ಮಾಡಿದ್ದು ತಪ್ಪೆ? ನನಗೇನೋ ಇಪ್ಪತ್ತೆರಡು ದಾಟಿದೆ. ಅವಳಿನ್ನೂ ಹದಿನೇಳರ ಹರೆಯದ ಅಪ್ರಾಪ್ತ ವಯಸ್ಕಳು. ಇನ್ನೂ ಮೆಜಾರಿಟಿಗೆ ಬಾರದವಳು. ಅವಳು ತನ್ನ ಬಗ್ಗೆ ಪ್ರಬುದ್ಧವಾಗಿ ಯೋಚಿಸಲು ಸಾಧ್ಯವಿಲ್ಲದವಳು. ಮದುವೆಯಾಗಲು ಇನ್ನೂ ಒಂದು ವರ್ಷ ಕಳೆಯಬೇಕು. ಇಷ್ಟಕ್ಕೂ ಅವಳು ಸ್ಪಷ್ಟವಾಗಿ ಹೇಳಿದ್ದಳಲ್ಲಾ? ಓದಿ ನನ್ನ ಕಾಲ ಮೇಲೆ ನಿಲ್ಲುವಂತಾಗದೆ ನಾನು ಮದುವೆಯ ಬಗ್ಗೆ ಯೋಚಿಸುವುದಿಲ್ಲ. ನೀನೂ ಮೊದಲು ಓದು ಮುಗಿಸಿ ಒಂದು ಕೆಲಸ ಹಿಡಿ. ಮೊದಲು ಸ್ವತಂತ್ರವಾಗಿ ಬದುಕು. ಆಮೇಲೆ ಪ್ರೀತಿ, ಪ್ರೇಮ, ಮದುವೆ ಎಲ್ಲಾ.

ಅವಳು ಹಾಗೆ ಹೇಳಿ ಮುಖ ತಿರುವಿ ತನ್ನ ಗೆಳತಿಯರೊಡನೆ ಹೊರಟು ಹೋಗಿದ್ದಳು. ಅವನಿಗೆ ಮುಖಕ್ಕೆ ಕೆರದಿಂದ ಹೊಡೆತ ತಿಂದ ಹಾಗಾಯಿತು. ನಾನು ಅವಳಿಗಿಂತ ನಾಲ್ಕು ವರ್ಷಕ್ಕೆ ದೊಡ್ಡವನು. ಇನ್ನೊಂದು ವರ್ಷದಲ್ಲಿ ಎಂ.ಎಸ್ಸಿ. ಮುಗಿಯುತ್ತದೆ. ಕೆಮಿಸ್ಟ್ರಿ ಆದುದರಿಂದ ಎಲ್ಲಾದರೂ ಕೆಲಸ ಸಿಕ್ಕೇ ಸಿಗುತ್ತದೆ. ಸ್ವಲ್ಪ ಕಾಯುವುದೆ? ಆದರೆ ಇವಳು ಗೆಳತಿಯರೆದುರು ನನ್ನನ್ನು ಅಪಮಾನಿಸಿದಳಲ್ಲಾ? ನಾನು ಒಬ್ಬ ಗಂಡು. ಹುಡುಗಿಯರು ಆಸಕ್ತಿಯಿಂದ ನೋಡುವಂತಹ ಗಂಡು. ಆದರೆ ಇವಳು, ನನಗಿಂತ ನಾಲ್ಕು ವರ್ಷಕ್ಕೆ ಚಿಕ್ಕವಳು. ನನಗೇ ಬುದ್ಧಿ ಮಾತು ಹೇಳುತ್ತಿದ್ದಾಳಲ್ಲಾ? ಕಲಿಸುತ್ತೇನೆ ಇವಳಿಗೆ. ಬೆಳಗಿನ ಹೊತ್ತು ಪ್ರೇಯರಿಗೆ ಮುನ್ನ, ಕಾಲೇಜಲ್ಲೇ ಅವಳ ಗೆಳತಿಯರೆದುರೇ ಆ್ಯಸಿಡ್ ಎರಚಿ ಓಡಿ ಬಿಡುತ್ತೇನೆ.

ಅದುವೇ ಸರಿ. ಆದರೆ ಯಾವ ಆ್ಯಸಿಡ್? ಸಲ್ಫ್ಯೂರಿಕ್ ಆ್ಯಸಿಡ್ ಅಥವಾ ಹೈಡ್ರೊಕ್ಲೋರಿಕ್ ಆ್ಯಸಿಡ್. ಸ್ವಲ್ಪ ಸೀರಿಯಸ್ ಪರಿಣಾಮ ಬೀರಬೇಕಾದರೆ ಸಲ್ಫ್ಯೂರಿಕ್ ಆ್ಯಸಿಡ್ಡೇ ಬಳಸಬೇಕು. ಎಲ್ಲಿಂದ ತರುವುದು? ಕೆಮಿಕಲ್ ಅಂಗಡಿಗಳಲ್ಲಿ ಅದನ್ನು ಕಾಲೇಜಿನ ಆರ್ಡರ್ ಇಲ್ಲದೆ ಕೊಡುವುದಿಲ್ಲ. ಅದು ಸಿಗುವುದು ಕೂಡಾ ದೊಡ್ಡ ದೊಡ್ಡ ಭರಣಿಗಳಲ್ಲಿ. ನನಗೆ ಬೇಕಾದದ್ದು ಶಾಯಿ ಬಾಟಲಿಯಲ್ಲಿ ತುಂಬಿಸಲು ಸಾಧ್ಯವಾಗುವಷ್ಟು ಮಾತ್ರ. ಕೆಮಿಸ್ಟ್ರಿ ಲ್ಯಾಬ್‌ನಲ್ಲಿ ಎರಡೂ ಇವೆ. ದೊಡ್ಡ ಭರಣಿಯಿಂದ ಸಣ್ಣ ಬಾಟಲಿಗೆ ತುಂಬಿಸುವವರು ಯಾರು? ಯಾರೂ ಲ್ಯಾಬಲ್ಲಿ ಇಲ್ಲದ ಹೊತ್ತಲ್ಲಿ ನಾನೇ ಹೋಗಿ ಬಿಡಲೆ? ಕೈಕಾಲು ನಡುಗಿ ಭರಣಿ ಬಿದ್ದು ಒಡೆದು ಹೋಗಿ ಇಡೀ ಲ್ಯಾಬಿಗೆ ಬೆಂಕಿ ಹಚ್ಚಿದರೇನು ಗತಿ? ಸಲ್ಫ್ಯೂರಿಕ್ ಆ್ಯಸಿಡ್ಡೇ ಸರಿ.